# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

ರಾಷ್ಟ್ರೀಯ ಸೇವಾ ಯೋಜನೆ

ದೂರವಾಣಿ ಸಂ : 0831-2405468

ಕುಲಸಚಿವರು

ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ನಿಮ್ಹಾನ್ಸ್/36/2019-20/2376 ದಿನಾಂಕ: - 8 JUL 2019

**:ಸುತ್ತೋಲೆ:**

**ವಿಷಯ:** ಜೀವನ ಕೌಶಲ್ಯ ತರಬೇತಿಗೆ ಎನ್.ಎಸ್.ಎಸ್.ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ:** ಯುಸೇಇ/ರಾಸೇಯೋ/ನಿಮ್ಹಾನ್ಸ್/2019-20/186 ದಿನಾಂಕ:05.07.2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16ರ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರಿಗೆ ನಿಮ್ಹಾನ್ಸ್ ಸಹಯೋಗದೊಂದಿಗೆ ಎನ್.ಎಸ್.ಎಸ್. ಯೋಜನಾಧಿಕಾರಿಗಳ ಮೂಲಕ ಜೀವನ ಕೌಶಲ್ಯ ತರಬೇತಿಯ ಹೊಸ ಯೋಜನೆಯನ್ನು ಘೋಷಿಸಿದ್ದಾರೆ. ಅದರಂತೆ 2019-20ನೇ ಸಾಲಿನಲ್ಲಿಯೂ ಇದನ್ನು ಮುಂದುವರಿಸಿದ್ದು, ನಿಮ್ಹಾನ್ಸ್ ಸಂಸ್ಥೆಯ ಈ ಕೆಳಗಿನ ದಿನಗಳಲ್ಲಿ ತರಬೇತಿ ಕಾರ್ಯಕ್ರಮವನ್ನು ನಡೆಸಲಿದೆ.

| ಅ. ನಂ. | ಇಂದ | ರವರೆಗೆ |
|---|---|---|
| 1 | 15.07.2019 | 20.07.2019 |
| 2 | 29.07.2019 | 03.08.2019 |
| 3 | 26.08.2019 | 31.08.2019 |

ಕಾರ್ಯಕ್ರಮವು ಲೆಕ್ಚರ್ ಹಾಲ್-1, ಎಪಿಡೀಮಿಯಾಲಜಿ ವಿಭಾಗ, ಜನ ಆರೋಗ್ಯ ಕೇಂದ್ರ, ನಿಮ್ಹಾನ್ಸ್ ಬೆಂಗಳೂರುನಲ್ಲಿ ನಡೆಯಲಿದೆ. ಸದರಿ ಕಾರ್ಯಕ್ರಮಕ್ಕೆ ಎನ್.ಎಸ್.ಎಸ್.ಯೋಜನಾಧಿಕಾರಿ ಅಲ್ಲದಿದ್ದರೂ ಆಸಕ್ತಿ ಇರುವ ಇತರ ಅಧ್ಯಾಪಕರ ನ್ನು ನಿಯೋಜಿಸಬಹುದಾಗಿದೆ. ತರಬೇತಿ ಪಡೆದ ಅಧ್ಯಾಪಕರು ನಂತರ ಸ್ವಯಂಸೇವಕರಿಗೆ ತರಬೇತಿ ನೀಡಬೇಕಾಗುತ್ತದೆ. **ತರಬೇತಿಗೆ ವಸತಿ, ಊಟ, ಮತ್ತು ಪ್ರಯಾಣ ವೆಚ್ಚವನ್ನು** ನಿಮ್ಹಾನ್ಸ್ ಬೆಂಗಳೂರು ಇವರ ನೀಡುತ್ತಾರೆ. ಕಳೆದ ಸಾಲಿನಲ್ಲಿ ತರಬೇತಿಯಲ್ಲಿ ಭಾಗವಹಿಸಿದ ಎನ್.ಎಸ್.ಎಸ್. ಅಧಿಕಾರಿಗಳು ಹಾಗೂ ಅಧ್ಯಾಪಕರು ತರಬೇತಿಯ ಬಗ್ಗೆ ಅತ್ಯಂತ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತರಬೇತಿ ಹೊಂದಿದ ಎನ್.ಎಸ್.ಎಸ್. ಯೋಜನಾಧಿಕಾರಿಗಳು ಅಥವಾ ಅಧ್ಯಾಪಕರು ತಮ್ಮ ಮತ್ತು ಸುತ್ತಮುತ್ತಲಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನಡೆಸಬಹುದಾಗಿದೆ. ಈ ಮೇಲಿನ ತರಬೇತಿ ಕಾರ್ಯಕ್ರಮಕ್ಕೆ ತಮ್ಮ ಮಹಾವಿದ್ಯಾಲಯದಿಂದ ಕಾರ್ಯಕ್ರಮಾಧಿಕಾರಿ/ಆಸಕ್ತಿ ಇರುವ ಇತರ ಅಧ್ಯಾಪಕರನ್ನು **ಕಡ್ಡಾಯವಾಗಿ** ನಿಯೋಜಿಸಬೇಕೆಂದು ಕೋರಲಾಗಿದೆ.

ಹೆಚ್ಚಿನ ವಿವರಗಳಿಗೆ ಡಾ.ಪ್ರದೀಪ್ ಬಿ.ಎಸ್. ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್ ಇವರನ್ನು ಸಂಪರ್ಕಿಸಬಹುದಾಗಿದೆ. ತರಬೇತಿಯಲ್ಲಿ ಭಾಗವಹಿಸುವ ಯೋಜನಾಧಿಕಾರಿಗಳು/ಅಧ್ಯಾಪಕರ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿವರಗಳನ್ನು ಕೂಡಲೆ ಅವರಿಗೆ ಕಳುಹಿಸಲು ಕೋರಲಾಗಿದೆ. (ದೂರವಾಣಿ: **ಡಾ.ಪ್ರದೀಪ್ ಬಿ.ಎಸ್** - 9845452250, ಇ-ಮೇಲ್ doctorpradeepbs@gmail.com ಮತ್ತು **ಡಾ.ಭರತ್ ಕಳಿದಿಂಡಿ**- 8792297778).

ವಂದನೆಗಳೊಂದಿಗೆ,

**ಕುಲಸಚಿವರು**

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.